

# ದುಃಖ ಸಾಗರದಲ್ಲಿ ಅರಳಿದ ಕುಸುಮ

**ಬದುಕಿನಲ್ಲಿ ಆಶಾವಾದದ ಬಾಗಿಲುಗಳೆಲ್ಲ ಮುಚ್ಚಿದ ಹಂತದಲ್ಲಿ, ಮುಚ್ಚಿದ ಬಾಗಿಲ ಕೋಣೆಯೊಂದರಲ್ಲಿ ಸಿಕ್ಕಿಹಾಕಿಕೊಂಡ ಇಬ್ಬರ ಕಥೆ ಇದು. ಆಕ್ರೋಶ ಉಕ್ಕಿಹರಿದ ಮೇಲೆ ಹೊಸ ಸಾಧ್ಯತೆಯ ಬಾಗಿಲು ತೆರೆದುಕೊಳ್ಳುತ್ತದೆ ಎಂಬ ನಂಬಿಕೆಯನ್ನೂ ಈ ಕಿರುಚಿತ್ರ ಹುಟ್ಟಿಸುವಂತಿದೆ.**

**■ ಗೌರಿ**

‘ಕುಸುಮ್’ ಕಿರುಚಿತ್ರ ಮನುಷ್ಯನ ನೆಮ್ಮದಿಯನ್ನು ಕಲುಕುವ ಕಾಣದ ಕೈ ಯಾವುದು ಎಂಬ ಪ್ರಶ್ನೆಯನ್ನು ಪರೋಕ್ಷವಾಗಿ ಎತ್ತುತ್ತದೆ. ಹಾಗೆಂದು ಇದು ತತ್ವಜ್ಞಾನದ ಕಥೆಯಲ್ಲ; ನೈತಿಕತೆಯ ಬೋಧನೆಯಲ್ಲ. ನಾಗರಿಕ ಸಮಾಜ, ಅನೈತಿಕ ಎಂದು ಪರಿಗಣಿಸಿರುವ ಜಾಗದಲ್ಲಿ (ಇದು ಮಾನಸಿಕ ಜಾಗವೂ ಹೌದು, ಭೌತಿಕ ಜಾಗವೂ ಹೌದು) ನಡೆಯುವ ಈ ಕಥೆ ಅದರ ನಿರೂಪಣಾ ಕ್ರಮದಲ್ಲಿಯೇ ನಮ್ಮನ್ನು ಬೆಚ್ಚಿಬೀಳಿಸುವ ಹಾಗಿದೆ. ಇದು ಗಾಯವನ್ನು ಮೋಹಕವಾಗಿ ಕಾಣಿಸುವ ಜನಪ್ರಿಯ ಕ್ರಮವಲ್ಲ; ಬದಲಿಗೆ ಗಾಯದ ನೋವನ್ನು, ಅದರ ವಾಸನೆಯನ್ನು ಇದ್ದಂತೆಯೇ ದಾಟಿಸುವ ಮೂಲಕ ಬೆಚ್ಚಿಬೀಳಿಸುವ ಕ್ರಮ.

ಟ್ರಾನ್ಸ್‌ಜೆಂಡರ್ ವೇಶ್ಯೆ ಮತ್ತು ಕೆಲಸ ಕಳೆದುಕೊಂಡ ಇಂಗ್ಲಿಷ್ ಶಿಕ್ಷಕ, ಇಬ್ಬರೂ ವೇಶ್ಯಾಗೃಹದ ಒಂದು ಕೋಣೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಅವನಿಗೆ ಕೆಲಸ ಕಳೆದುಕೊಂಡ ಮಾನಸಿಕ ಒತ್ತಡ. ಸಾಯಲು ನಿರ್ಧರಿಸಿದ್ದಾನೆ. ಆದರೆ ತಾನು ಯಾಕೆ ಸಾಯುತ್ತಿದ್ದೇನೆ ಎಂದು ಯಾರಿಗಾದರೂ ಹೇಳಿಯೇ ಸಾಯಬೇಕು ಎಂದು ನಿರ್ಧರಿಸಿ ವೇಶ್ಯಾಗೃಹಕ್ಕೆ ಬಂದಿದ್ದಾನೆ. ಬಾಲ್ಯದಲ್ಲಿಯೇ ತಂದೆತಾಯಿಯಿಂದ ದೂರವಾಗಿ ವೇಶ್ಯಾಗೃಹದಲ್ಲಿಯೇ ಬದುಕುತ್ತಿರುವ ಟ್ರಾನ್ಸ್‌ಜೆಂಡರ್‌ಗೆ ಅಲ್ಲಿಂದ ಹೇಗಾದರೂ ತಪ್ಪಿಸಿಕೊಂಡರೆ ತನಗೊಂದು ಹೊಸ ಬದುಕು ಸಿಕ್ಕಬಹುದೇನೋ ಎಂಬ ಆಸೆ. ತನ್ನ ಬಳಿಯಿರುವ ಪುಟಾಣಿ ಗೊಂಬೆಯ ಬಳಿ ತನ್ನ ಮಗುವಿನ ಹಾಗೇ ಮಾತಾಡುತ್ತ, ತನ್ನ ಕನಸುಗಳನ್ನು ಅದಕ್ಕೆ ಆರೋಪಿಸುತ್ತ ಬದುಕಿನ ಜೀವಂತಿಕೆಗೆ ಒಳದಾರಿ ಕಂಡುಕೊಂಡಿರುವ ವೇಶ್ಯೆ ಅವಳು. ಇಂಗ್ಲಿಷ್ ಕಲಿಯಬೇಕು, ಇಂಗ್ಲಿಷ್ ಕಲಿತರೆ ಜಗತ್ತನ್ನೇ ಗೆಲ್ಲಬಹುದು ಎಂಬ ನಂಬಿಕೆಯೂ ಅವಳಿಗಿದೆ. ಅಂಥವಳು ಒಬ್ಬ ಇಂಗ್ಲಿಷ್ ಶಿಕ್ಷಕನ ಜೊತೆಯಲ್ಲಿಯೇ ಕೋಣೆಯಲ್ಲಿ ಬಂದಿಯಾಗುತ್ತಾಳೆ.



**ಹೆಸರು:** ಕುಸುಮ್ (ಮರಾಠಿ)
**ನಿರ್ದೇಶನ:** ಶುಮೋನ್ ಬ್ಯಾನರ್ಜಿ
**ಛಾಯಾಗ್ರಹಣ:** ರಾಘವೇಂದ್ರ ಮಾಲಮ್
**ಧ್ವನಿ ವಿನ್ಯಾಸ:** ಅಭಿಕ್ ಚಟರ್ಜಿ
**ತಾರಾಗಣ:** ರೂಮಕ್ ರಾಯ್, ತಾರಿಕ್ ವಾಸುದೇವ್

ಸಾಮಾನ್ಯವಾಗಿ ಇಂಥ ಸನ್ನಿವೇಶಗಳನ್ನು ಅತಿಭಾವುಕತೆಯಲ್ಲಿ, ನಿಧಾನಗತಿಯಲ್ಲಿ ನಿರೂಪಿಸುವುದು ಜನಪ್ರಿಯ ಕ್ರಮ. ಆದರೆ ಇಲ್ಲಿ ನಿರ್ದೇಶಕರು ಅದಕ್ಕೆ ಪೂರ್ತಿ ವಿರುದ್ಧವೆನಿಸುವ, ಕೊಂಚ ನಾಟಕೀಯ ವಿಡಂಬನೆಯ ಮತ್ತು ಅತಿಯೆನಿಸುವ ವೇಗದಲ್ಲಿಯೇ ಚಿತ್ರ ಕಟ್ಟಿದ್ದಾರೆ. ಆ ವೇಗ ಹೇಗಿದೆ ಎಂದರೆ ಇಬ್ಬರ ಬದುಕಿನ ದುರಂತಗಳ ಹಸಿ ಹಸಿ ತುಣುಕುಗಳನ್ನು ರಪರಪನೆ ಪ್ರೇಕ್ಷಕನ ಮುಖಕ್ಕೆ ಎಸೆದು ‘ತಗೋ ಚಪ್ಪರಿಸು’ ಎಂದ ಹಾಗಿದೆ. ಆ ಬಿಡುಬೀಸುತನವೇ ನಮ್ಮನ್ನು ಕಂಗಾಲುಗೊಳಿಸುತ್ತದೆ. ಚಿತ್ರದ ವೇಗಕ್ಕೆ ವಿರುದ್ಧವಾಗಿ ನಮ್ಮ ಮನಸೊಳಗೆ, ಒದ್ದೆಹಾಳೆಯ ಮೇಲೆ ಬಿದ್ದ ಇಂಕಿನ ಹನಿಯಂತೆ ನಿಧಾನಕ್ಕೆ ವಿಷಾದ ಪಸರಿಸುತ್ತ ಹೋಗುತ್ತೆ.

ತೆರೆಯ ಮೇಲಿನ ಬಣ್ಣಗಳ ಸಂಯೋಜನೆಯಲ್ಲಿ, ವಸ್ತ್ರಗಳು, ನಟನೆಯ ಕ್ರಮ ಎಲ್ಲದರಲ್ಲಿಯೂ ಈ ಢಾಳುಗುಣ ಎದ್ದುಕಾಣುತ್ತದೆ. ಅವುಗಳೇ ಈ ಚಿತ್ರದ ಶಕ್ತಿಯೂ ಹೌದು. ವೇಶ್ಯೆಯನ್ನು ಮಂಚಕ್ಕೆ ಕಟ್ಟಿಹಾಕಿ ತನ್ನ ವೇದನೆಯನ್ನು ಹೇಳುವ ಶಿಕ್ಷಕ, ಅವನನ್ನು ಹೊರನೂಕಲೆತ್ನಿಸುತ್ತ ತನ್ನ ಬದುಕನ್ನು ಬಿಚ್ಚಿಡುವ ವೇಶ್ಯೆ, ಇವೆಲ್ಲವನ್ನೂ ಆತ್ಮದ ಕಣ್ಣಿನ ಹಾಗೆ ನೋಡುತ್ತಿರುವ ಗೊಂಬೆ ಎಲ್ಲವೂ ಸೇರಿ ಇಡೀ ಕಿರುಚಿತ್ರವೇ ಪ್ರೇಕ್ಷಕನ ಮನಸ್ಸಲ್ಲಿ ಒಂದು ಅಮೂರ್ತ ಚಿತ್ರವನ್ನು ಕೆತ್ತಿನಿಲ್ಲಿಸುವಷ್ಟು ಶಕ್ತವಾಗಿದೆ.

ಯಾವುದೇ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವ ಹಂಬಲವಿಲ್ಲದಿದ್ದರೂ, ಎರಡು ಪಾತ್ರಗಳ ಮಧ್ಯೆ ನಾಗರಿಕ ಸಮಾಜದ ರಿವಾಜುಗಳನ್ನು ಮೀರಿದ ಒಂದು ವಿಚಿತ್ರ ಸಂಬಂಧದ ಬೆಳೆಯುವುದನ್ನು ತುಂಬ ಸಶಕ್ತವಾಗಿ ನಿರ್ದೇಶಕರು ಹಿಡಿದಿಟ್ಟಿದ್ದಾರೆ. ಕೊನೆಯಲ್ಲಿ ಅವಳು ಇಂಗ್ಲಿಷ್ ಶಿಕ್ಷಕನಿಗೆ ‘ನನಗೆ ಇಂಗ್ಲಿಷ್ ಹೇಳಿಕೊಡುತ್ತೀಯಾ’ ಎಂದು ಕೇಳುವಲ್ಲಿ ಚಿತ್ರ ಮುಗಿಯುತ್ತದೆ. ಅದೊಂದು ಬಗೆಯಲ್ಲಿ ಮತ್ತೊಂದು ಕಥೆಯ ಆರಂಭವೂ ಹೌದು. ಯಾವುದೇ ಒಳ್ಳೆಯ ಕಥನದ ಅಂತ್ಯದಲ್ಲಿ ಇನ್ನೊಂದು ಕಥೆಯ ಆರಂಭವೂ ಇರುತ್ತದೆಯಲ್ಲವೇ?

ಈ ಕಿರುಚಿತ್ರ ವೀಕ್ಷಣೆಗೆ bit.ly/2wG63nl ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.